2.—The Mysore Agriculturists Loans Bill, 1963 as passed by the Legislative Council.

3.—The Bombay Merged Territories and Areas (Jagirs Abolition) (Mysore Amendment) Bill 1963, as passed by the Legislative Council.

4.—The Mysore Bhoodan Yagna Bill, 1963 as passed by the Legislative Council.

Sri. B. D. JATTI (Minister for Finance).—Sir I beg to lay on the Table Notification No. FD. 8 CSL 61, dated 5th February 1963 (Amendments to the Mysore Sales Tax Rules, 1957) as required under Section 39 of the Mysore Sales Tax, Act 1957.

Report of the Joint Select Committee on the Mysore Forests Bill, 1962—Presented.

Sri B. RACHIAH (Minister for Forest and Fisheries).—Sir, I beg to present the report of the Joint Select Committee on the Mysore Forest Bill, 1962.

UNIVERSITY OF AGRICULTURAL SCIENCES BILL, 1963.

Motion to consider—Contd.

ಶ್ರೀ ಜಿ. ನಾರಾಯಣಗೌಡ.—ಸ್ವಾಮಿ, ಈ ಕೃಷಿ ವಿಜ್ಞಾನ ವಿಶ್ವವಿದ್ಯಾನಿಲಯದ ಸ್ಥಾಪನೆ ಬಗ್ಗೆ ತಂದಿರುವ ಈ ಮಸೂದೆಯ ಅವಶ್ಯಕತೆ ಕುರಿತು ನಾನು ಹಿಂದೆ ಪ್ರಸ್ತಾಪಿಸಿದ್ದೇನೆ. ಈಗ ಈ ಮಸೂದೆಯಲ್ಲಿ ಅಡಕವಾಗಿರುವ ಮುಖ್ಯಾಂಶಗಳ ವಿಷಯಗಳ ಬಗ್ಗೆ ಕೆಲವು ಮಾತುಗಳನ್ನು ಆಡುತ್ತೇನೆ.

ಮುಖ್ಯವಾಗಿ ಇಲ್ಲಿ ವ್ಯವಸಾಯ, ಉದ್ಯಾನವನ, ತೋಟಗಾರಿಕೆ, ಪಶು ವಿಜ್ಞಾನ, ಮೀನುಗಾರಿಕೆ, ಮುಂತಾದ ವಿಷಯಗಳಿಗೆ ಸಂಬಂಧಪಟ್ಟ ವಿಜ್ಞಾನಗಳ ಮೇಲೆ ಶಿಕ್ಷಣ ನೀಡಲಾಗುವುದು. ಈಗಿರುವ ಕರ್ನಾಟಕ ವಿಶ್ವವಿದ್ಯಾನಿಲಯಕ್ಕೆ ಅಫಿಲಿಯೇಟ್ ಆಗಿರುವ ಧಾರವಾಡ ಕಾಲೇಜು ಮತ್ತು ಮೈಸೂರು ವಿಶ್ವವಿದ್ಯಾನಿಲಯಕ್ಕೆ ಅಫಿಲಿಯೇಟ್ ಆಗಿರುವ ಹೆಬ್ಬಾಳದ ವೆಟೆನೆರಿ ಕಾಲೇಜು ಮತ್ತು ಅಗ್ರಿಕಲ್ಚರಲ್ ಕಾಲೇಜು ಈ ವಿಶ್ವವಿದ್ಯಾನಿಲಯದ ಅಸ್ತಿತ್ವಕ್ಕೆ ಬಂದಾಗ್ಗೆ ಈ ವಿಶ್ವವಿದ್ಯಾನಿಲಯಕ್ಕೆ ಅಫಿಲಿಯೇಟ್ ಆಗುವುದು.

ಹಾಗೂ ಈ ವಿಶ್ವವಿದ್ಯಾನಿಲಯದ ಅಧಿಕಾರಿಗಳು ಯಾರು ಅನ್ನುವುದೂ ಇವು ಈ ಮಸೂದೆಯೊಳಗೆ ಅಡಕವಾಗಿವೆ:— Chancellor, Pro-Chancellor, Vice-Chancellor, Dean, Comptroller, Registrar, Librarian, Director of Instruction, Veterinary College, Hebbal, Director of Instruction, Agricultural College, Hebbal, Director of Instruction, Agricultural College, Dharwar, Director of Research, Director of Extension, Heads of Divisions ಮತ್ತು Statutes ಪ್ರಕಾರವಾಗಿ ನೇಮಿಸಲಾಗುವ ಅಧಿಕಾರಿಗಳು, ವಿಶ್ವವಿದ್ಯಾನಿಲಯದ ಅಧಿಕಾರಿಗಳಾಗುವರು.

ಈ ವಿಶ್ವವಿದ್ಯಾನಿಲಯದ ಆಡಳಿತಕ್ಕೆ Board of Regents Academic Counicl Board of studies, ಹಾಗೂ ಇತರ ಸಂಸ್ಥೆಗಳು ಮತ್ತು ಕಾನೂನು ರೀತ್ಯಾಗಲ ಅಥವ ಸ್ಟಾಟೂಟ್ಸ್ ರೀತ್ಯಾಗಲ ನೇಮಿಸಲಾಗುವರು. ವಿಶ್ವವಿದ್ಯಾನಿಲಯ ಆಡಳಿತದ ಅಧಿಕಾರ ವಹಿಸುತ್ತಾರೆ.

ಹಾಗೂ ಈ Board of Regents ರಚನೆ ವಿಷಯದೊಳಗೆ ಒಂದೆರಡು ಮಾತನ್ನಾಡುವುದು ಸೂಕ್ತ ಅಂತ ಕಾಣುತ್ತದೆ. ಈ ರಚನೆಯೊಳಗೆ ಸಾಧಾರಣವಾಗಿ ex-officio ಮೆಂಬರುಗಳು ಹೀಗೆ ಇರುತ್ತಾರೆ.